ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

ಸಂಖ್ಯೆ:ಸಿ1(1)ನೌ.ಸೇ.ಆನ್‌ಲೈನ್/01/2020-21 ದಿನಾಂಕ.10-09-2020

**-:ಅಧಿಕೃತ ಜ್ಞಾಪನ:-**

ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರ "ಶಿಕ್ಷಕ ಮಿತ್ರ" ಆನ್‌ಲೈನ್ ತಂತ್ರಾಂಶದ ಮೂಲಕ ಸೇವಾ ಸೌಲಭ್ಯಗಳನ್ನು ಒದಗಿಸುವ ಕುರಿತು

ಉಲ್ಲೇಖ:-
1.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(3) ರ.ಮಂ.ಅ.102/2018-19 ದಿನಾಂಕ: 21.01.2019
2.ಸರ್ಕಾರದ ಆದೇಶ ಸಂಖ್ಯೆ: ಇಡಿ 02 ಡಿಎಆರ್ 2019 ದಿನಾಂಕ: 06.02.2019
3.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ2(2) ಸಿ.ಸಿ.ಎ/ಸು -1/2018-19 ದಿನಾಂಕ: 14.02.2019
4.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(7)ಪ್ರ.ಭ.ಮಂ-137/2018-19 ದಿನಾಂಕ: 30.03.2019
5.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(1)(2) ಪ್ರ.ದಿ.ಅ-01/2018-19 ದಿನಾಂಕ: 30.03.2019
6.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(5)ಹೆ.ಸೇ.ಸೆ-53/2018-19 ದಿನಾಂಕ: 03.04.2019
7.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ2(5) ವೇ.ಬ-01/2018-19 ದಿನಾಂಕ: 03.04.2019
8.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(6)(8) ಆಸ್ತಿ ಖರೀದಿ ಅನು-45/18-19 ದಿನಾಂಕ: 03.04.2019
9.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(3)ಉ.ವ್ಯಾ.ಅ-149/2018-19 ದಿನಾಂಕ: 03.04.2019
10.ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ:ಸಿ1(1)/ನೌ.ಸೇ.ಆನ್ ಲೈನ್/01/2018-19 ದಿನಾಂಕ:08-04-2019.

********

ಸಾರ್ವಜನಿಕ ಶಿಕ್ಷಣ ಇಲಾಖೆಯು ರಾಜ್ಯ ಸರ್ಕಾರದ ಅತ್ಯಂತ ಮಹತ್ವದ ಇಲಾಖೆಗಳಲ್ಲಿ ಒಂದಾಗಿದ್ದು, ಹೆಚ್ಚು ಮಾನವ ಸಂಪನ್ಮೂಲವನ್ನು ಹೊಂದಿರುವ ಇಲಾಖೆಯಾಗಿದೆ. ಸುಮಾರು 2.5 ಲಕ್ಷ ಶಿಕ್ಷಕರು, ಅಧಿಕಾರಿಗಳು ಮತ್ತು ಬೋಧಕೇತರ ಸಿಬ್ಬಂದಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರೆಲ್ಲರಿಗೆ ಅಗತ್ಯ ಸೇವೆಗಳನ್ನು ಸಕಾಲದಲ್ಲಿ ಒದಗಿಸುವುದು ಇಲಾಖೆಯ ಆಡಳಿತಾತ್ಮಕ ಕರ್ತವ್ಯವಾಗಿದೆ.

ಪ್ರಸ್ತುತ ತಾಂತ್ರಿಕ ಯುಗದಲ್ಲಿ ಆನ್‌ಲೈನ್ ಮೂಲಕ ಸೇವೆಯನ್ನು ನಿಗಧಿತ ಅವಧಿಯೊಳಗೆ ತ್ವರಿತವಾಗಿ ಒದಗಿಸಲು, ಸೇವಾ ವಿಧಾನವನ್ನು ಸರಳೀಕರಣಗೊಳಿಸಲು ಮತ್ತು ಸಿಬ್ಬಂದಿಗಳ ಕಾರ್ಯ ತತ್ಪರತೆಯಲ್ಲಿ

ದಕ್ಷತೆ ಹಾಗೂ ಉತ್ಸಾಹ ಹೆಚ್ಚಿಸಲು ಕರ್ನಾಟಕ ಸೇವಾ ನಿಯಮಗಳು 1958, ಕರ್ನಾಟಕ ಸಿವಿಲ್ ಸೇವೆ (ಸಿಸಿಎ) ನಿಯಮಗಳು 1957, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966ರಡಿಯಲ್ಲಿನ ನಿಯಮ ತಿದ್ದುಪಡಿಗಳು ಆದೇಶಗಳು ಅನುಮತಿ ಪ್ರಾಧಿಕಾರಿಗಳ ಸಂಬಂಧದ ಆದೇಶಗಳು ಹಾಗೂ ಆಗಿಂದಾಗ್ಗೆ ಹೊರಡಿಸುವ ಆದೇಶಗಳ ಪರಿದಿಗೆ ಒಳಪಟ್ಟ ಆನ್‌ಲೈನ್ ತಂತ್ರಾಂಶ ಸೃಜಿಸಲಾಗಿದೆ. ಉಲ್ಲೇಖದ ಆದೇಶಗಳನ್ವಯ ಈ ಸೇವೆಗಳನ್ನು ಆನ್‌ಲೈನ್‌ನಲ್ಲೇ ನೀಡಲು ಸೂಚನೆ ನೀಡಲಾಗಿದೆ

ಮುಂದುವರೆದು, ಶಿಕ್ಷಕರು ತಮ್ಮ ಹಕ್ಕಿನ ಸೌಲಭ್ಯಗಳಿಗಾಗಿ ತರಗತಿಯಿಂದ ಹೊರಗುಳಿದು ಕಛೇರಿಗಳಿಗೆ ಅಲೆಯುವುದನ್ನು ತಪ್ಪಿಸಿ, ತರಗತಿ ಚಟುವಟಿಕೆಗಳಲ್ಲಿ ನಿರಂತರವಾಗಿ ಪಾಲ್ಗೊಂಡು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ, ಕೆಳಕಂಡ ಸೇವೆಗಳನ್ನು **"ಶಿಕ್ಷಕ ಮಿತ್ರ"** ಮೊಬೈಲ್ ಆಪ್ ತಂತ್ರಾಂಶದ ಮುಖಾಂತರ ಒದಗಿಸಲು ಇಲಾಖೆ ನಿರ್ಣಯಿಸಲಾಗಿದೆ. **"ಶಿಕ್ಷಕ ಮಿತ್ರ" ಮೊಬೈಲ್ ಆಪ್ ತಂತ್ರಾಂಶವನ್ನು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ: 28.08.2020ರಂದು ಲೋಕಾರ್ಪಣೆ ಮಾಡಿರುತ್ತಾರೆ**. ಮುಂದಿನ ದಿನಗಳಲ್ಲಿ ಕೆಳಕಂಡ ಎಲ್ಲಾ ಸೇವೆಗಳನ್ನು ಕೇವಲ ಆನ್‌ಲೈನ್ ಮುಖೇನ ಮಾತ್ರ ಒದಗಿಸಬೇಕು ಮತ್ತು ಪ್ರತಿ ಸೇವೆಯ ಮುಂದೆ ತೋರಿಸಿರುವಂತೆ ನಿಗದಿತ ಕಾಲಮಿತಿಯೊಳಗೆ ಸೇವೆಯನ್ನು ನೀಡಬೇಕು.

**"ಶಿಕ್ಷಕ ಮಿತ್ರ"** ಮೊಬೈಲ್ ಆಪ್ ತಂತ್ರಾಂಶದಲ್ಲಿ ಈ ಕೆಳಕಂಡ ಸೇವಾ ಸೌಲಭ್ಯಗಳನ್ನು ಒದಗಿಸಲಾಗಿದೆ.

| ಕ್ರಮ ಸಂಖ್ಯೆ | ಸೇವೆಯ ಹೆಸರು | ನಿಗದಿಪಡಿಸಿದ ಕಾಲಮಿತಿ (ದಿನಗಳಲ್ಲಿ) |
|---|---|---|
| 1. | ರಜೆ (ಸಾಂದರ್ಭಿಕ ರಜೆ) | – |
| 1ಎ. | ಗಳಿಕೆ/ಪರಿವರ್ತಿತ ರಜೆ ಹಾಗೂ ಇತರೆ ರಜೆಗಳು | 20 |
| 1ಬಿ. | ಗಳಿಕೆ ರಜೆ ನಗಧೀಕರಣ | 30 |
| 2. | ನಿಯಮ–32 ಮತ್ತು ನಿಯಮ–68ರ ಅಡಿಯಲ್ಲಿ ಪ್ರಭಾರ ಭತ್ಯೆ. | 30 |
| 3. | ಖಾಲಿ ನಿವೇಶನ/ಕಟ್ಟಡಗಳ/ವಾಹನಗಳ/ಇತರೆ ವಸ್ತುಗಳ ಖರೀದಿಗೆ/ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ. | 30 |
| 4. | ಹೊಸ ಪಾಸ್ ಪೋರ್ಟ್/ಪಾಸ್ ಪೋರ್ಟ್ ನವೀಕರಣಕ್ಕೆ ನಿರಾಕ್ಷೇಪಣಾ ಪತ್ರ ನೀಡುವಿಕೆ. | 30 |
| 5. | ವೈಯಕ್ತಿಕ ವಿದೇಶ ಪ್ರವಾಸ ಕೈಗೊಳ್ಳಲು ನಿರಾಕ್ಷೇಪಣಾ ಪತ್ರ ನೀಡುವಿಕೆ. | 30 |
| 6. | ನಿಯಮ 247–ಎ ಮತ್ತು 252–ಬಿ ಅಡಿಯಲ್ಲಿ ಪಿಂಚಣಿ ಸೌಲಭ್ಯಕ್ಕಾಗಿ ಹೆಚ್ಚುವರಿ ಅರ್ಹತಾ ಸೇವೆ ಮಂಜೂರಾತಿ. | 30 |
| 7. | ಉನ್ನತ ವಿದ್ಯಾಭ್ಯಾಸಕ್ಕಾಗಿ ಅನುಮತಿ ನೀಡುವಿಕೆ. | 30 |
| 8. | ಎಲ್.ಟಿ.ಸಿ/ಹೆಚ್.ಟಿ.ಸಿ ಗಳ ಮಂಜೂರಾತಿ. | 30 |
| 9. | ಜಿ.ಪಿ.ಎಫ್ ಮುಂಗಡ/ಭಾಗಶ: ವಾಪಾಸ್ಸಾತಿ/ಅಂತಿಮ ಪಾವತಿ. | 30 |
| 10. | ಹಬ್ಬದ ಮುಂಗಡ ಮಂಜೂರಾತಿ. | 15 |
| 11. | ವೈಯಕ್ತಿಕ ವೇತನ (ಎಸ್.ಎಫ್.ಎನ್) | 30 |
| 12. | ಅಂಗವಿಕಲ ಭತ್ಯೆ. | 30 |

| | | |
|---|---|---|
| 13. | ಪ್ರಥಮ ವೇತನ ಪ್ರಮಾಣ ಪತ್ರ | 30 |
| 14. | ಬೇರೆ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅನುಮತಿ ಪತ್ರ. | 30 |

ಇಲಾಖೆಯ ಅಂತರ್ಜಾಲ http://www.sts.karnataka.gov.in ರಲ್ಲಿ **ಶಿಕ್ಷಣ ಕಿರಣ**ದ ಇ.ಇ.ಡಿ.ಎಸ್ ನಲ್ಲಿ ವಿವಿಧ ಹಂತದ ಡಿ.ಡಿ.ಓ ಗಳು ಲಾಗಿನ್ ಆಗಲು ಅವಕಾಶ ಕಲ್ಪಿಸಲಾಗಿದೆ. ಡಿ.ಡಿ.ಓ ರವರು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ, ಶಿಕ್ಷಕರು ಹಾಗೂ ಸಿಬ್ಬಂದಿಯವರನ್ನು ನೋಂದಣಿ ಮಾಡಲು ಕ್ರಮ ವಹಿಸುವುದು. ನೋಂದಣಿಯಾಗಿರುವ ಕಛೇರಿ ಸಿಬ್ಬಂದಿಯವರಿಗೆ ಹುದ್ದೆಯನ್ನು ವಹಿಸಿ,(Assign Post) ಲಾಗಿನ್ ಐಡಿಯನ್ನು ಸೃಜಿಸುವುದು. ನಂತರ ಕಛೇರಿಯ ವಿಷಯ ನಿರ್ವಾಹಕರಿಗೆ ಸೇವಾ ಕಾರ್ಯಗಳ ಹಂಚಿಕೆ ಮಾಡುವುದು. ವಿಷಯ ನಿರ್ವಾಹಕರು ಹಾಗೂ ಅಧಿಕಾರಿಗಳು ಸೇವಾ ಸೌಲಭ್ಯಗಳನ್ನು ಆನ್‌ಲೈನ್ ಮೂಲಕ ನಿಗದಿತ ಅವಧಿಯಲ್ಲಿ ಇತ್ಯರ್ಥಪಡಿಸುವುದು. ತಂತ್ರಾಂಶದಲ್ಲಿ ಮಾಹಿತಿ ಅಪ್‌ಲೋಡ್ ಮಾಡುವ/ಅನುಮತಿ ನೀಡುವ ಅಧಿಕಾರಿಗಳ ಡಿಜಿಟಲ್ ಸಹಿ ಅಳವಡಿಕೆಯಾಗುವವರೆಗೆ ಮಂಜೂರಾತಿ ಆದೇಶವನ್ನು ತಂತ್ರಾಂಶದಿಂದ ಡೌನ್‌ಲೋಡ್ ಮಾಡಿ ಅಧಿಕಾರಿಗಳೇ ಸ್ವತ: ಸಹಿ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು. ಅಪ್‌ಲೋಡ್ ಮಾಡಿದ ಆದೇಶವನ್ನು ಅರ್ಜಿದಾರರು ತಮ್ಮ ಲಾಗಿನ್ ನಿಂದ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಇನ್ನು ಮುಂದೆ ಇಲಾಖೆಯಲ್ಲಿ ಸೇವಾ ಸೌಲಭ್ಯಗಳಿಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸ್ವೀಕರಿಸಿ, ಆನ್‌ಲೈನ್‌ನಲ್ಲೇ ಪರಿಶೀಲಿಸಿ ಇತ್ಯರ್ಥಪಡಿಸುವುದು. ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿ, ಶಿಕ್ಷಕರು ಹಾಗೂ ಸಿಬ್ಬಂದಿಯವರು ಸೇವಾ ಸೌಲಭ್ಯಕ್ಕಾಗಿ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಭೌತಿಕ ರೂಪದಲ್ಲಿ ಸಲ್ಲಿಸುವಂತಿಲ್ಲ.

ಅಧಿಕಾರಿಗಳು, ಶಿಕ್ಷಕರು ಹಾಗೂ ಸಿಬ್ಬಂದಿಯವರು ಇಲಾಖೆಯ ವೆಬ್‌ಸೈಟ್ ವಿಳಾಸ: http://www.sts.karnataka.gov.inರಲ್ಲಿ ಪ್ರಕಟಿಸಲಾದ ಪ್ರಸ್ತಾಪಿತ ಆನ್‌ಲೈನ್ ಸೇವೆಗಳಿಗೆ ಸಂಬಂಧಿಸಿದಂತೆ ಕೈಪಿಡಿಯನ್ನು, ಮಾರ್ಗಸೂಚಿಗಳನ್ನು (ವಿಡೀಯೋ ಒಳಗೊಂಡಂತೆ) ಹಾಗೂ ಆದೇಶಗಳನ್ನು ಹೆಚ್ಚಿನ ಮಾಹಿತಿಗೆ ಪರಿಶೀಲಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸಂದೇಹಗಳು, ಸಮಸ್ಯೆಗಳು ಹಾಗೂ ಸಲಹೆಗಳಿದ್ದಲ್ಲಿ **karonlineserviceshelp@gmail.com** ಇ-ಮೇಲ್‌ಗೆ ಮೇಲ್ ಮಾಡಲು ಸೂಚಿಸಿದೆ.

11/9/20

(ಡಾ. ಕೆ.ಜಿ.ಜಗದೀಶ)
ಆಯುಕ್ತರು

ಇವರಿಗೆ:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಡಳಿತ ಮತ್ತು ಸುಧಾರಣೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು. ಇವರ ಮಾಹಿತಿಗಾಗಿ
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲ್ಬುರ್ಗಿ ರವರಿಗೆ ಅಗತ್ಯ ಕ್ರಮಕ್ಕಾಗಿ
5. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ನಿರ್ದೇಶಕರು ರವರಿಗೆ ಅಗತ್ಯ ಕ್ರಮಕ್ಕಾಗಿ

6. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರು ರವರಿಗೆ ಅಗತ್ಯ ಕ್ರಮಕ್ಕಾಗಿ
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿ ರವರಿಗೆ ಅಗತ್ಯ ಕ್ರಮಕ್ಕಾಗಿ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು (ಆಡಳಿತ) ಮತ್ತು ಉಪ ನಿರ್ದೇಶಕರುಗಳು (ಅಭಿವೃದ್ಧಿ), ರವರಿಗೆ ಅಗತ್ಯ ಕ್ರಮಕ್ಕಾಗಿ
9. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
10. ಆಯುಕ್ತರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ
11. ಕಛೇರಿ ಪ್ರತಿ.